ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

ಸಂ.ಜಿಪಂಬ/ಆಡಳಿತ/219/2016-17(ಭಾಗ)    ದಿನಾಂಕ:01.03.2021

## ಅಧಿಸೂಚನೆ

ವಿಷಯ: ಬಳ್ಳಾರಿ ಜಿಲ್ಲಾ ಪಂಚಾಯತಿಯ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ ಹಾಗೂ ಸಾಮಾನ್ಯ ಸ್ಥಾಯಿ ಸಮಿತಿ ಸದಸ್ಯರುಗಳ ಆಯ್ಕೆಗಾಗಿ ಚುನಾವಣೆ ನಡೆಸುವ ಕುರಿತು.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆಯ ಅಧಿಸೂಚನೆ ದಿನಾಂಕ:18.01.2021

****

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 188(1)ರನ್ವಯ ನಿರ್ದಿಷ್ಟಪಡಿಸಿದ ಈ ಕೆಳಕಂಡ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳ ಆಯ್ಕೆಗಾಗಿ ಬಳ್ಳಾರಿ ಜಿಲ್ಲಾ ಪಂಚಾಯತಿಯ ವಿವಿಧ ಸ್ಥಾಯಿ ಸಮಿತಿಗಳ ಸದಸ್ಯರುಗಳ ಆಯ್ಕೆಗಾಗಿ ಚುನಾವಣೆಯನ್ನು ಉಲ್ಲೇಖದ ಅಧಿಸೂಚನೆಯ ಮೂಲಕ ದಿನಾಂಕ:27.01.2021 ರಂದು ನಡೆಸಲಾಗಿರುತ್ತದೆ.

1. ಸಾಮಾನ್ಯ ಸ್ಥಾಯಿ ಸಮಿತಿ
2. ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
3. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
4. ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
5. ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ

ಮೇಲಿನಂತೆ ನಡೆಸಿದ ಚುನಾವಣೆಯಲ್ಲಿ ಸಾಮಾನ್ಯ ಸ್ಥಾಯಿ ಸಮಿತಿ ಮತ್ತು ಹಣಕಾಸು ಮತ್ತು ಲೆಕ್ಕ ಪರಿಶೋಧನೆ ಹಾಗೂ ಯೋಜನಾ ಸ್ಥಾಯಿ ಸಮಿತಿ ಹೊರತುಪಡಿಸಿ ಉಳಿದ ಸ್ಥಾಯಿ ಸಮಿತಿಗಳಿಗೆ ನಿರ್ದಿಷ್ಟಪಡಿಸಿದಂತೆ ಸದಸ್ಯರುಗಳು ಆಯ್ಕೆಯಾಗಿರುತ್ತಾರೆ. ಆದರೆ ಸಾಮಾನ್ಯ ಸ್ಥಾಯಿ ಸಮಿತಿ ಮತ್ತು ಹಣಕಾಸು ಮತ್ತು ಲೆಕ್ಕಪರಿಶೋಧನೆ ಹಾಗೂ ಯೋಜನಾ ಸ್ಥಾಯಿ ಸಮಿತಿಗಳಿಗೆ ನಿರ್ದಿಷ್ಟಪಡಿಸಿದಂತೆ ಯಾವುದೇ ಸದಸ್ಯರುಗಳು ನಾಮಪತ್ರಗಳನ್ನು ಸಲ್ಲಿಸದೇ ಇರುವುದರಿಂದ ಸದರಿ ಈ ಕೆಳಕಂಡ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಆಯ್ಕೆ ಮಾಡಲು ***ದಿನಾಂಕ:18.03.2021 ರಂದು*** ಚುನಾವಣೆ ನಡೆಸಲಾಗುವುದು.

1. **ಸಾಮಾನ್ಯ ಸ್ಥಾಯಿ ಸಮಿತಿ**
2. **ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ**

ಈ ಪತ್ರದೊಂದಿಗೆ ಮೇಲ್ಕಂಡ ಎರಡೂ ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಡೆಸಲು ಚುನಾವಣಾ ವೇಳಾ ಪಟ್ಟಿಯನ್ನು ಲಗತ್ತಿಸಿದೆ. ಅದರನ್ವಯ ಚುನಾವಣೆಯನ್ನು ನಡೆಸಲಾಗುವುದು. ಸದರಿ ವೇಳಾ ಪಟ್ಟಿಯಲ್ಲಿ ತಿಳಿಸಿದಂತೆ ಆಯಾ ಸ್ಥಾಯಿ ಸಮಿತಿಗೆ ನಿಯಮ 8ರನ್ವಯ ವಿವಿಧ ಅಧಿಕಾರಿಗಳನ್ನು "ಗೊತ್ತುಪಡಿಸಿದ ಅಧಿಕಾರಿ" ಎಂದು ನೇಮಕ ಮಾಡಲಾಗಿದ್ದು ಅವರುಗಳಿಗೆ ಮೇಲ್ಕಂಡ ಎರಡೂ ಸ್ಥಾಯಿ ಸಮಿತಿಗಳಿಗೆ ಸ್ಪರ್ಧಿಸಲಿಚ್ಛಿಸುವ ಸದಸ್ಯರುಗಳು ನಿಗದಿಪಡಿಸಿದ ದಿನಾಂಕದಂದು ಮತ್ತು ಸಮಯದೊಳಗೆ ತಮ್ಮ ನಾಮಪತ್ರಗಳನ್ನು ಸಲ್ಲಿಸಬಹುದು ಎಂದು ಈ ಮೂಲಕ ತಿಳಿಯಪಡಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಬಳ್ಳಾರಿ

ಇವರಿಗೆ

1. ಮಾನ್ಯ ರಾಜ್ಯ ಸಭಾ / ಲೋಕ ಸಭಾ ಸದಸ್ಯರು, ಬಳ್ಳಾರಿ
2. ಜಿಲ್ಲೆಯ ಎಲ್ಲಾ ಮಾನ್ಯ ಶಾಸಕರುಗಳಿಗೆ
3. ಮಾನ್ಯ ಅಧ್ಯಕ್ಷರು/ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ಬಳ್ಳಾರಿ ಅವರಿಗೆ ಮಾಹಿತಿಗಾಗಿ

ಕಚೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

## ಬಳ್ಳಾರಿ ಜಿಲ್ಲಾ ಪಂಚಾಯತಿಯ ವಿವಿಧ ಸ್ಥಾಯಿ ಸಮಿತಿಗಳಿಗಾಗಿ ನಡೆಸಲಿರುವ ಚುನಾವಣಾ ವೇಳಾಪಟ್ಟಿ

| ಕ್ರ.ಸಂ. | ವಿವರ | |
|---|---|---|
| ಆಯ್ಕೆ ಮಾಡಬೇಕಾದ ಒಟ್ಟು ಸದಸ್ಯರ ಸಂಖ್ಯೆ | | |
| 1 | 1) ಸಾಮಾನ್ಯ ಸ್ಥಾಯಿ ಸಮಿತಿ | 06 |
| | 2) ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ | 06 |
| ಸ್ಥಾಯಿ ಸಮಿತಿಗಳ ಚುನಾವಣಾ ಪ್ರಕ್ರಿಯೆಗೆ ಗೊತ್ತುಪಡಿಸಿದ ಅಧಿಕಾರಿಗಳು | | |
| 1 | ಸಾಮಾನ್ಯ ಸ್ಥಾಯಿ ಸಮಿತಿ | ಮುಖ್ಯ ಯೋಜನಾಧಿಕಾರಿ, ಜಿ.ಪಂ.ಬಳ್ಳಾರಿ |
| 2 | ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ | ಯೋಜನಾ ನಿರ್ದೇಶಕರು (ಡಿಆರ್‌ಡಿಎ), ಜಿ.ಪಂ. ಬಳ್ಳಾರಿ |
| ಸ್ಥಾಯಿ ಸಮಿತಿಗಳ ಚುನಾವಣಾ ವೇಳಾಪಟ್ಟಿ | | |
| 1 | ನಾಮಪತ್ರ ಸ್ವೀಕರಿಸುವ ಸ್ಥಳ | ಜಿ.ಪಂ. ಕಛೇರಿಯಲ್ಲಿ ಗೊತ್ತುಪಡಿಸಿದ ಅಧಿಕಾರಿಗಳ ಕೊಠಡಿ |
| 2 | ನಾಮಪತ್ರಗಳನ್ನು ಸ್ವೀಕರಿಸುವ ದಿನಾಂಕ | 18.03.2021 ರಂದು ಬೆಳಿಗ್ಗೆ 9.00 ಗಂಟೆಯಿಂದ ಮ.12.00 ರವರೆಗೆ |
| 3 | ನಾಮಪತ್ರ ಪರಿಶೀಲನೆ ಮತ್ತು ನಾಮಪತ್ರ ಹಿಂಪಡೆಯುವ ದಿನಾಂಕ | 18.03.2021 ರಂದು ಮ.12.00 ರಿಂದ ಮ.1.00 ರವರೆಗೆ |
| 4 | ಅವಶ್ಯವಿದ್ದಲ್ಲಿ ಮತದಾನದ ದಿನಾಂಕ ಮತ್ತು ಸಮಯ | 18.03.2021 ರಂದು ಮ.3.30 ರಿಂದ 5.00 ವರೆಗೆ |
| 5 | ಮತದಾನದ ಸ್ಥಳ | ಜಿ.ಪಂ.ಕಛೇರಿ, ಬಳ್ಳಾರಿ |
| 6 | ಮತಗಳ ಎಣಿಕೆ ಸ್ಥಳ ಮತ್ತು ದಿನಾಂಕ | ದಿನಾಂಕ;18.03.2021 ರಂದು ಸಾಯಂಕಾಲ 5.30 ಗಂಟೆಯ ನಂತರ |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಬಳ್ಳಾರಿ